# ಶ್ರೀಮಾತೆಯವರ ಪತ್ರಗಳು

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

ಶ್ರೀಮಾತೆ ಶಾರದಾದೇವಿಯವರು ತಮ್ಮ ಶಿಷ್ಯಂದಿರ ಅಥವಾ ಸೇವಕರ ಮೂಲಕ ಪತ್ರವನ್ನು ಓದಿಸುತ್ತ, ಬರೆಸುತ್ತ ವ್ಯವಹರಿಸುತ್ತಿದ್ದರು. ಈ ಪತ್ರಗಳ ಉದ್ದಕ್ಕೂ ಶ್ರೀಮಾತೆಯವರ ದಿವ್ಯಪ್ರೇಮ ಹರಿದಾಡುತ್ತಿದೆ. ಬಂಗಾಳಿಯಲ್ಲಿ ಈ ಪತ್ರಗಳನ್ನು ಸಂಗ್ರಹಿಸಿ **'ಮಾಯೇರ್ ಚಿಟ್ಟಿ'** ಎಂದು ಪ್ರಕಟಿಸಲಾಗಿದೆ. (ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್ ಪ್ರಕಟಣೆ). ಅದರಿಂದ ಆಯ್ದ ಕೆಲವು ಪತ್ರಗಳನ್ನಿಲ್ಲಿ ಅನುವಾದಿಸಿ ಕೊಡಲಾಗಿದೆ. ಅನುವಾದಕಿ ಚಿಕ್ಕಮಗಳೂರು ಶ್ರೀಶಾರದಾ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

೧೮೮೬ರಲ್ಲಿ ಶ್ರೀರಾಮಕೃಷ್ಣರು ಮಹಾಸಮಾಧಿಯನ್ನು ಹೊಂದಿದರು. ತಮ್ಮ ನಂತರ ತಮ್ಮ ಅವತಾರದ ಉದ್ದೇಶವನ್ನು ನೆರವೇರಿಸಲು ತಮ್ಮ ಪತ್ನಿಗೆ ಅವರು ಎಲ್ಲಾ ರೀತಿಯ ತರಬೇತಿಯನ್ನು ನೀಡಿದ್ದರು. ಅಂತೆಯೇ ಅವರ ಮಹಾಸಮಾಧಿಯ ಬಳಿಕ ಶ್ರೀಶಾರದಾದೇವಿಯವರು ತಮ್ಮನ್ನು ತಾವು ಎಷ್ಟು ಗೋಪ್ಯವಾಗಿಟ್ಟುಕೊಳ್ಳಲು ಶ್ರಮಿಸಿದರೂ, ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರೂ, ಗೃಹಸ್ಥ ಶಿಷ್ಯರೂ ಅವರನ್ನು ಅದಾಗಲೇ ಸ್ಥಾಪಿತವಾಗಿದ್ದ ಶ್ರೀರಾಮಕೃಷ್ಣ ಸಂಘದ ಸಂಘಜನನಿಯನ್ನಾಗಿ ಮಾಡಿಕೊಂಡು, ಆಧ್ಯಾತ್ಮಿಕ ಗುರುವಾಗಿಯೂ, ಮಾತೆಯಾಗಿಯೂ ಪೂಜಿಸತೊಡಗಿದ್ದರು. ಅವರಿಂದ ಸ್ವಂತ ತಾಯಿಗಿಂತಲೂ ಹೆಚ್ಚಿನ ಸ್ನೇಹವನ್ನು ಪಡೆಯತೊಡಗಿದ್ದರು. ಶ್ರೀಶಾರದಾದೇವಿಯವರು ಜಯರಾಮಬಾಟಿಯಲ್ಲಿ ಇರುವಾಗಲೂ, ಕೊಲ್ಕತ್ತದಲ್ಲಿರುವಾಗಲೂ ಅವರ ಬಳಿ ಹೋಗಿ, ಅಥವಾ ಪತ್ರದ ಮೂಲಕ ತಮ್ಮ ತಮ್ಮ ಕಷ್ಟಸುಖಗಳನ್ನು ಹೇಳಿಕೊಂಡು ಆಧ್ಯಾತ್ಮಿಕ ಶಾಂತಿಯನ್ನು ಪಡೆಯುತ್ತಿದ್ದರು. ಜಗನ್ಮಾತೆ ಶ್ರೀಶಾರದಾದೇವಿಯವರಂತೂ ಅವರ ಆಧ್ಯಾತ್ಮಿಕ ಜೀವನ ಹಾಗೂ ಐಹಿಕಜೀವನದ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು, ಅವರಿಗೆ ಬೆಂಬಲವಾಗಿದ್ದರು. ಭಕ್ತರ ಜೊತೆ ನಡೆದ ಸಂಭಾಷಣೆ ಮತ್ತು ಅವರ ಪತ್ರಗಳಿಗೆ ನೀಡಿದ ಉತ್ತರಗಳಲ್ಲಿ ಇದನ್ನು ನೋಡಬಹುದು.

(೧)

*ಬಲರಾಮ ಬಸು ಶ್ರೀರಾಮಕೃಷ್ಣರ ಅತ್ಯಂತ ನಿಕಟ ಭಕ್ತರಾಗಿದ್ದರು. ಶ್ರೀ ರಾಮಕೃಷ್ಣರ ಮಹಾಸಮಾಧಿಯ ನಂತರ ಅವರ ಸಂನ್ಯಾಸಿ ಶಿಷ್ಯರಂತೂ ಅವರಿಗೆ ಇನ್ನೂ ಹತ್ತಿರದವರಾಗಿದ್ದರು. ಶ್ರೀಮಾತೆಯವರು ಆಗಾಗ ಅವರ ಮನೆಯಲ್ಲಿ ತಂಗಿ, ಶ್ರೀರಾಮಕೃಷ್ಣರ ಅತಿ ಪ್ರೀತಿಯ ಈ ಭಕ್ತನನ್ನು ಅತ್ಯಂತ ಆದರದಿಂದ ನೋಡಿಕೊಳ್ಳುತ್ತಿದ್ದರು. ಜಯರಾಂಬಾಟಿಯಲ್ಲಿದ್ದಾಗ ಪತ್ರದ ಮೂಲಕ ಅವರ ಕ್ಷೇಮಸಮಾಚಾರವನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಆ ಪತ್ರದಲ್ಲಿ ಉಳಿದ ಸಂನ್ಯಾಸೀ ಶಿಷ್ಯರ ಬಗ್ಗೆ, ಹಾಗೂ ಗೃಹಸ್ಥಶಿಷ್ಯರ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದರು. ಈ ಕೆಳಗಿನ ಪತ್ರದಲ್ಲಿ ಶ್ರೀಮಾತೆಯವರು ಅವರಿಗಾಗಿ ಎಷ್ಟೊಂದು ಚಿಂತಿಸುತ್ತಿದ್ದರೆಂಬುದು ತಿಳಿಯುವುದು:*



ಶ್ರೀ ಶ್ರೀ ಗುರುದೇವ

ಜಯರಾಂಬಾಟಿ, ಗುರುವಾರ
೨೩-೧೧-೧೮೯೮

ಆಶೀರ್ವಾದ ಪತ್ರ

ರಾಖಾಲನಿಗೆ ಜ್ವರ ಬಂದಿತ್ತು. ಅವನು ಈಗ ಹುಷಾರಾಗಿದ್ದಾನೆ ತಾನೆ? ನೀವು ಹೇಗಿದ್ದೀರಿ? ನಿಮಗೆ ಜ್ವರ ಬಂದಿದೆ ಎಂದು ಕೇಳಿ ತುಂಬಾ ಚಿಂತೆಯಾಯಿತು. ಹೇಗಿದ್ದೀರಿ ಎಂದು ಯಾವಾಗಲೂ ಪತ್ರ ಬರೆದು ತಿಳಿಸಿ. ನಿಮಗೆ ನನ್ನ ಆಶೀರ್ವಾದವಿದೆ. ಮಾಸ್ಟರ್ ಮಹಾಶಯರ ಮನೆಯ ಸುದ್ದಿ ಏನು? ಅವರು ಏಕೆ ಪತ್ರ ಬರೆಯುತ್ತಿಲ್ಲ? ರಾಖಾಲ್ ಪಶ್ಚಿಮಕ್ಕೆ ಹೋಗುತ್ತಾನೆಂದು ಕೇಳಿದೆ. ಕಳೆದ ಬಾರಿ (ಪುರಿ) ಜಗನ್ನಾಥಕ್ಕೆ ಚಳಿಗಾಲದಲ್ಲಿ ಹೋಗಿ ತುಂಬಾ

ಕಷ್ಟಪಟ್ಟಿದ್ದ. ಚಳಿಗಾಲದ ನಂತರ ಫಾಲ್ಗುಣ ಕಳೆದ ಮೇಲೆ ಹೋದರೆ ವಾಸಿ. ಆದರೆ ಅವನಿಗೆ ಈಗಲೇ ಹೋಗಬೇಕೆಂಬ ಇಚ್ಛೆ ಇದ್ದರೆ ಹೋಗಲಿ, ಇನ್ನೇನು ಹೇಳಲಿ? ಇಲ್ಲಿ ಒಂಭತ್ತು ದಿನಗ ಳಿಂದ ಮಳೆ ಸುರಿಯುತ್ತಿದೆ. ಆದ್ದರಿಂದ ಯೋಗಿನ್ ಮಾ, ಗೋಲಾಪ್ ಮಾ ಮೊದಲಾದವರಿಗೆ ಇಲ್ಲಿಂದ ಹೊರಡಲು ಸಾಧ್ಯ ವಾಗುತ್ತಿಲ್ಲ. ಶಾರದಾ (ಶಾರದಾಪ್ರಸನ್ನ, ಸ್ವಾಮಿ ತ್ರಿಗುಣಾತೀತಾ ನಂದರು) ವರಾಹನಗರಕ್ಕೆ ಹೋಗಲಿದ್ದಾನೆ. ಇಲ್ಲಿ ಎಲ್ಲರೂ ಕ್ಷೇಮ ವಾಗಿದ್ದಾರೆ. ನಾನೂ ಚೆನ್ನಾಗಿದ್ದೇನೆ. ನಿನಗೆ ನನ್ನ ಆಶೀರ್ವಾದ. ಹುಡುಗ ಯೋಗಿನ್ (ಸ್ವಾಮಿ ಯೋಗಾನಂದರು) ಚಿತ್ರಕೂಟ ದಿಂದ ಪತ್ರ ಬರೆದಿದ್ದ. ಅವನು ಚೆನ್ನಾಗಿದ್ದಾನೆ.

ಇತಿ, ನಿನ್ನ ತಾಯಿ

(೨)

*‘ಶ್ರೀರಾಮಕೃಷ್ಣ ವಚನವೇದ’ವನ್ನು ಬರೆದ ಮಹೇಂದ್ರನಾಥ ಗುಪ್ತ (‘ಮ’) ರವರ ಪತ್ನಿ ನಿಕುಂಜಾದೇವಿ ಸಾಂಸಾರಿಕ ದು:ಖ ದಿಂದ ಮಾನಸಿಕವಾಗಿ ನರಳುತ್ತಿದ್ದಾಗ ಶ್ರೀಮಾತೆ ಸಾಂತ್ವನ ನೀಡಿ ಬರೆದ ಪತ್ರವಿದು:*

ಶ್ರೀಶ್ರೀಗುರುದೇವ ಕೃಪೆ

ಆಷಾಢ ೨

ಅಂಚೆ ದಿನಾಂಕ : ೧೭-೭-೯೪

ದೀರ್ಘಾಯುಷ್ಯದ ಶುಭಹಾರೈಕೆಗಳು.

ನಿನ್ನ ಪತ್ರ ತಲುಪಿ, ಎಲ್ಲ ಸಮಾಚಾರ ತಿಳಿದುಕೊಂಡೆನು. ‘ಶ್ರೀಮಾತೆ ನನ್ನನ್ನು ಮರೆತಿದ್ದಾರೆ’ ಎಂದು ಬರೆದಿರುವೆ. ಆದರೆ ನಾನು ಮರೆತಿಲ್ಲ. ಇಲ್ಲಿ ತುಂಬಾ ಜನರು ಬಂದು ಹೋಗುತ್ತಿರು ವುದರಿಂದ ಅವರ ಮೂಲಕ ನಿಮ್ಮ ಸಮಾಚಾರವೆಲ್ಲ ತಿಳಿಯುತ್ತಿದೆ. ಆದ್ದರಿಂದ ಪ್ರತ್ಯೇಕವಾಗಿ ನಿಮಗೆ ಬರೆಯುತ್ತಿಲ್ಲ. ಅದಕ್ಕಾಗಿ ದು:ಖಿಸಬೇಡ. ನಾನು ನಿನ್ನನ್ನು ಹೃದಯಪೂರ್ವಕವಾಗಿ ತುಂಬಾ ಪ್ರೀತಿಸುತ್ತಿದ್ದೇನೆ. ನೀನು ಬರೆದಿರುವೆ, ಆತ್ಮಹತ್ಯೆ ಮಾಡಿಕೊಳ್ಳುವೆ ಎಂದು. ಇದನ್ನು ಬಾಯಲ್ಲಿ ಎಂದಿಗೂ ಬರಗೊಡಬೇಡ. ಅದ ನ್ನಾಡುವುದು ಮಹಾಪಾಪವಾಗುವುದು. ನೀನೇನು ಮಾಡುವೆ? ಸ್ವಲ್ಪ ಹೇಗಾದರೂ ಸಹಿಸಿಕೋ. ನಮ್ಮ ಊರಿಗೆ ಬಂದು ಇಲ್ಲಿ ನದೀತೀರದಲ್ಲಿ ನಡೆದಾಡು. ನಿನ್ನನ್ನು ಯಾವಾಗಲೂ ಜ್ಞಾಪಿಸಿ ಕೊಳ್ಳುತ್ತಿರುತ್ತೇನೆ ಹಾಗೂ ನಿನ್ನನ್ನು ಅತ್ಯಂತ ಪ್ರೀತಿಸುತ್ತೇನೆ. ಮಾಸ್ಟರ್ ಮಹಾಶಯ ಕಳುಹಿಸಿರುವ ಎರಡು ಸೀರೆಗಳನ್ನು ಉಡುತ್ತಿದ್ದೇನೆ. ಇದನ್ನು ಮಾಸ್ಟರ್ ಮಹಾಶಯನಿಗೆ ತಿಳಿಸು. ಅವನಿಗೆ ನನ್ನ ಆಶೀರ್ವಾದವನ್ನು ತಿಳಿಸು. ನಿನಗೂ ನನ್ನ ಆಶೀ ರ್ವಾದಗಳು. ನಿನ್ನ ಮಕ್ಕಳಿಗೂ, ಹೆತ್ತ ತಾಯಿಗೂ ನನ್ನ ಆಶೀ ರ್ವಾದಗಳನ್ನು ತಿಳಿಸು. ಭಗವಂತನಲ್ಲಿ ಶರಣಾಗತಳಾಗು. ಆಗಾಗ ಪತ್ರ ಬರೆಯುತ್ತಿರು. ನಿಜವಾಗಿಯೂ ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ. ಯಾವಾಗಲೂ ಜ್ಞಾಪಿಸಿಕೊಳ್ಳುತ್ತಿದ್ದೇನೆ. ಇಲ್ಲಿ ಎಲ್ಲರೂ ಕುಶಲ. ನಿಮ್ಮ ಕುಶಲದ ಬಗ್ಗೆ ತಿಳಿಸುತ್ತಿರು.

ಇತಿ, ನಿನ್ನ ತಾಯಿ

## ಶ್ರೀಮಾತೆಯವರ ಲೀಲಾಮಾಧುರ್ಯ

ಒಂದು ಸಲ ಜಯರಾಮಬಾಟಿಯಲ್ಲಿ ಶ್ರೀಮಾತೆಯವರ ಜನ್ಮದಿನದಂದು ಭಕ್ತರಿಗೆಲ್ಲ ಆಸೆಯಾಯಿತು, ಶ್ರೀಮಾತೆ ಮೊದಲು ಊಟ ಮಾಡಲಿ, ಅನಂತರ ಶಿಷ್ಯಂದಿರು ಅವರ ಪ್ರಸಾದ ಸ್ವೀಕರಿಸುವರು ಎಂಬುದಾಗಿ. ಅವರಲ್ಲಿ ಒಬ್ಬನದು ಅತಿಯಾದ ಉತ್ಸಾಹ. ಅವನೇ ಮುಂದಡಿಯಿಟ್ಟು ಶ್ರೀಮಾತೆಯವರಿಗೆ ಈ ವಿಷಯವನ್ನು ತಿಳಿಸಿದ. ಶ್ರೀಮಾತೆ ಅದಕ್ಕೆ ಏನನ್ನೂ ಪ್ರತಿಯಾಗಿ ಹೇಳಲಿಲ್ಲ, ಮೌನವಾಗಿ ಸಮ್ಮತಿಸಿದರು. ಶ್ರೀರಾಮಕೃಷ್ಣರ ನೈವೇದ್ಯವಾದ ಬಳಿಕ ಎಲ್ಲ ಖಾದ್ಯ ಪ್ರಸಾದಗಳನ್ನು ಒಂದು ತಟ್ಟೆಯಲ್ಲಿ ಜೋಡಿಸಿ, ಒಂದು ಆಸನದ ಮುಂದೆ ಅದನ್ನಿಟ್ಟು, ಶ್ರೀಮಾತೆಯನ್ನು ಊಟಕ್ಕೆ ಕರೆದರು. ಅವರು ನಿಧಾನವಾಗಿ ಯಂತ್ರ ಚಲಿಸುವಂತೆ ಬಂದು ಆಸನದಲ್ಲಿ ಕುಳಿತರು. ಕರುಣಾಪೂರ್ಣವಾದ ದೃಷ್ಟಿಯಿಂದ ಅವರು ತಟ್ಟೆಯಲ್ಲಿದ್ದ ಎಲ್ಲ ಪದಾರ್ಥಗಳನ್ನು ನೋಡಿದರು, ಎಲ್ಲವನ್ನೂ ಒಂದಿಷ್ಟು ಬಾಯಿಗೆ ಹಾಕಿಕೊಂಡರು. ಅನಂತರ ತಮ್ಮ ಮುಂದಿದ್ದ ಶಿಷ್ಯನ ಮುಖದತ್ತ ನೋಡಿ ಅತ್ಯಂತ ಕಾತರರಾಗಿ, ‘‘ನನ್ನ ಮಕ್ಕಳು ಊಟ ಮಾಡುವ ಮೊದಲು ನನ್ನ ಗಂಟಲಲ್ಲಿ ಆಹಾರ ಇಳಿಯುತ್ತಿಲ್ಲ. ಬೇಗನೆ ನೀವೆಲ್ಲ ಊಟ ಮಾಡುವುದಕ್ಕೆ ವ್ಯವಸ್ಥೆ ಮಾಡು’’ ಎಂದರು. ಹಾಗೆ ಹೇಳಿದವರೇ ಕೈಬಾಯಿ ತೊಳೆದು ಎದ್ದುಬಿಟ್ಟರು. ತಮ್ಮ ಕೋಣೆಗೆ ಹೋಗಿ, ತಮ್ಮ ಮಕ್ಕಳು (ಶಿಷ್ಯಂದಿರು) ಊಟ ಮಾಡುವುದನ್ನು ನೋಡಲು ಬಾಗಿಲ ಬಳಿ ಕುಳಿತರು. ಎಲ್ಲ ವ್ಯವಸ್ಥೆಯನ್ನೂ ಚೆನ್ನಾಗಿ ಮಾಡಲಾಗಿತ್ತು ; ಕೆಲವೇ ಕ್ಷಣಗಳಲ್ಲಿ ಶಿಷ್ಯಂದಿ ರೆಲ್ಲ ಊಟಕ್ಕೆ ಕುಳಿತರು. ಆಗ ಶ್ರೀಮಾತೆಯವರ ಜೀವಕ್ಕೆ ತಂಪೆರೆದಂತಾಯಿತು. ಯಾವ ಮೂರ್ಖ ಶಿಷ್ಯ ತಾನೇ ಮುಂದಾಗಿ ಶ್ರೀಮಾತೆಯವರನ್ನು ಮೊದಲು ಊಟ ಮಾಡುವಂತೆ ಒತ್ತಾಯಿಸಿ ಅವರನ್ನು ಒಪ್ಪಿಸಿದ್ದನೋ, ಹಾಗೂ ಅದರಿಂದ ಸಂತಸಗೊಂಡಿ ದ್ದನೋ, ಅವನಿಗೆ ಈಗ ಬೋಧೆಯುಂಟಾಯಿತು, ‘ತಾನೆಂಥ ಕೆಲಸ ಮಾಡಿಬಿಟ್ಟೆ! ಈ ದಿನ ಶ್ರೀಮಾತೆಯವರಿಗೆ ಊಟವಿಲ್ಲದಂತೆ ಮಾಡಿಬಿಟ್ಟೆನಲ್ಲ ! ಎಂದಿನಂತೆ ಶಿಷ್ಯಂದಿರ ಊಟಕ್ಕೆ ಮೊದಲೇ ವ್ಯವಸ್ಥೆ ಮಾಡಿ, ಅನಂತರ ಶ್ರೀಮಾತೆಯವರನ್ನು ಉಳಿದ ಹೆಣ್ಣು ಮಕ್ಕಳೊಂದಿಗೆ ಊಟಕ್ಕೆ ಕುಳ್ಳಿರಿಸಿದ್ದರೆ ಚನ್ನಾಗಿರುತ್ತಿತ್ತು , ಅವರು ಶಾಂತವಾಗಿ ಊಟ ಮಾಡಿಬಿಡುತ್ತಿದ್ದರು. ಹಾ! ನಾವೆಲ್ಲ ವೈಭವಕ್ಕೆ ದಾಸರು. ಅವರ ಈ ಮಾಧುರ್ಯಮಯವಾದ ಲೀಲೆಯನ್ನು ನಾವು ಹೇಗೆ ತಾನೇ ತಿಳಿದೇವು?’

*– ಸ್ವಾಮಿ ಶಾರದೇಶಾನಂದ, ‘ಶ್ರೀ ಶ್ರೀ ಮಾಯೇರ್ ಪದಪ್ರಾಂತೇ’ ಗ್ರಂಥದಿಂದ*